



# ಮೈಸೂರಿನ ಹಿರಿಮೆಗೆ ಪಿಕ್ಚರ್ ಕಾರ್ಡ್ ಠಸ್ಸೆ




**ವಿದೇಶಗಳಲ್ಲಿ ಮೈಸೂರಿನ ಬಗ್ಗೆ ಆಕರ್ಷಣೆ ಹುಟ್ಟಲು ಪಿಕ್ಚರ್ ಪೋಸ್ಟ್ ಕಾರ್ಡ್‌ಗಳ ಕೊಡುಗೆಯೂ ಇದೆ. ಅರಮನೆ, ದಸರಾ, ಜಂಬೂಸವಾರಿ ಸೇರಿದಂತೆ ಮೈಸೂರಿಗೆ ಸಂಬಂಧಿಸಿದ ವಿಶೇಷ ಸಂಗತಿಗಳನ್ನು ಈ ಪಿಕ್ಚರ್ ಕಾರ್ಡ್‌ಗಳು ಬಿಂಬಿಸುತ್ತಿದ್ದವು.**

**ಎನ್‌. ಜಗನ್ನಾಥ ಪ್ರಕಾಶ್**



**ಪ್ರಿಯೆ ಹೇಗಿದ್ದೀಯ,**
ಹೋದ ವಾರಾಂತ್ಯಕ್ಕೆ ನಾವು ರಾಜಧಾನಿ ಮೈಸೂರಿಗೆ ಭೇಟಿ ಕೊಟ್ಟಿದ್ದೆವು. ಮೈಸೂರು ಸುಂದರವಾದ ಊರು. ವಿಶಾಲವಾದ ರಸ್ತೆಗಳು, ಆಕರ್ಷಕ ಕಟ್ಟಡಗಳು. ಅದರಲ್ಲೂ ಮುಖ್ಯವಾದ ಅರಮನೆ ಕಟ್ಟಡ ಕಲಾತ್ಮಕವಾಗಿದ್ದು ನೋಡಲು ಚೆನ್ನ'.
ಇನ್ನೊಮ್ಮೆ ಬರೆಯುವೆ.

ಇಂತಿ ನಿನ್ನವ
**ಪೀಟರ್ ಹ್ಯಾಟ್ಲೆ**
ಕ್ಯಾಂಪ್, ಬೆಂಗಳೂರು.

ಇದು ಸ್ವಾತಂತ್ರ್ಯಪೂರ್ವದಲ್ಲಿ ಬೆಂಗಳೂರಿನಲ್ಲಿ ನೆಲೆ ನಿಂತಿದ್ದ ಬ್ರಿಟಿಷ್ ಸೈನ್ಯದ ಸೈನಿಕನೊಬ್ಬ ತನ್ನ ಊರಲ್ಲಿದ್ದ ಪತ್ನಿಗೆ ಬರೆದ ಅಂಚೆ ಕಾರ್ಡ್‌ನಲ್ಲಿರುವ ಒಕ್ಕಣೆಯ ಕನ್ನಡರೂಪ.

ಸೈನಿಕರು ಕೆಲಸದ ನಿಮಿತ್ತ ಪರ ಊರುಗಳಿಗೆ ಹೋದಲ್ಲೆಲ್ಲ ಮಡದಿ, ಮಕ್ಕಳು, ಮನೆಯವರನ್ನು ಕರೆದೊಯ್ಯಲು ಸಾಧ್ಯವಿರಲಿಲ್ಲ. ಬಂಧುಮಿತ್ರರನ್ನು ಸಂಪರ್ಕಿಸಲು ಈಗ ಹಲವು ಉಪಾಯಗಳಿವೆ. ಹಿಂದೆ ಇದ್ದುದು 'ಅಂಚೆ' ಮಾತ್ರ. ಮನೆಯವರನ್ನು ಸಂಪರ್ಕಿಸಲು, ಯೋಗಕ್ಷೇಮ ತಿಳಿಸಲು, ತಿಳಿಯಲು ಏಕೈಕ ಸಾಧನ ಅಂಚೆಯಾಗಿತ್ತು. ತಾವು ಹೋಗಿ ಬಂದ, ನೋಡಿ ಬಂದ ಸ್ಥಳಗಳನ್ನು ತಿಳಿಸಲು ಕಡಿಮೆ ಖರ್ಚಿನ 'ಪಿಕ್ಚರ್ ಪೋಸ್ಟ್ ಕಾರ್ಡ್' ಬಳಕೆಯಲ್ಲಿತ್ತು. ಒಂದು ಬದಿಯಲ್ಲಿ ಮುದ್ರಿತ ಚಿತ್ರ. ಇನ್ನೊಂದು ಬದಿಯಲ್ಲಿ ಸಂಕ್ಷಿಪ್ತ ಮಾಹಿತಿಯೊಂದಿಗೆ ತಲುಪಬೇಕಾದವರ ವಿಳಾಸ ಮಾತ್ರ ಇರುವ ಪಿಕ್ಚರ್ ಪೋಸ್ಟ್ ಕಾರ್ಡ್ ಕಳಿಸಲು ತೆರಬೇಕಿದ್ದ ಖರ್ಚು ಕೂಡ ಕಡಿಮೆ.

150 ವರ್ಷಗಳ ಹಿಂದೆ ಸಂಪರ್ಕ ಸಾಧನವಾಗಿ ಅಂಚೆ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಾಗ ಅದು ರಾಜಮನೆತನದವರು, ಅಧಿಕಾರಿಗಳಿಗೆ

